S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 66/2025

**ಚಾ.ಸಾ.-3  ಫ್ರಾ.ಸಾ.-3**

| | |
|---|---|
| **ಸಾಕ್ಷಿದಾರರ ಹೆಸರು** | **ಉದಯಕುಮಾರ** |
| **ತಂದೆಯ ಹೆಸರು** | **ರಾಜು** |
| **ವಯಸ್ಸು** | **20 ವರ್ಷಗಳು** |
| **ಉದ್ಯೋಗ** | **ಖಾಸಗಿ ಉದ್ಯೋಗ** |
| **ವಾಸ** | **ಚಾಮನಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು** |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 1 ನನ್ನ ಅಕ್ಕ . ಚಾಸಾ 2 ನನ್ನ ತಂದೆ. ಚಾಸಾ 4 , 5 ನಮ್ಮ ಅಕ್ಕಪಕ್ಕದವರು. ನಾವು 30 ವರ್ಷದಿಂದ ಮಹದೇಶ್ವರ ಪ್ರಾವಿಜನ್ ಸ್ಟೋರು ಇಟ್ಟುಕೊಂಡಿದ್ದೇನೆ. ಆರೋಪಿತರನ್ನು ನೋಡಿದ್ದೇನೆ ಆದರೆ ಪರಿಚಯ ಇಲ್ಲ. ಗಲಾಟೆ ಆಗುವಾಗ ನಾನು ಇರಲಿಲ್ಲ. ಒಂದು ವರೆ ಎರಡು ವರ್ಷದ ಹಿಂದೆ 8 ಗಂಟೆ ಸಮಯದಲ್ಲಿ ಯಾರೊ ನಿಂತುಕೊಂಡು ಜೋರಾಗಿ ಅವರವರೆ ಮಾತಾಡಿಕೊಳ್ಳುತ್ತಿದ್ದರಂತೆ ಆಗ ನನ್ನ ಅಕ್ಕ ದೂರಹೋಗಿ ಮಾತಾಡಿ ಎಂದಳಂತೆ. ನನಗೆ ಮತ್ತು ತಂದೆ , ಅಕ್ಕನಿಗೆ ಯಾರೂ ತೊಂದರೆ ಕೊಡಲಿಲ್ಲ. ನಾವ್ಯಾರುಕೂಡ ಆರೋಪಿತರ ವಿರುದ್ದ ಯಾವ ದೂರು ಕೊಟ್ಟಿಲ್ಲ. ಅವರ ಮೇಲೆ ಯಾವ ಪ್ರಕರಣ ದಾಖಲಾಗಿದೆ ಗೊತ್ತಿಲ್ಲ. ಪೊಲೀಸರು ವಿಚಾರಿಸಿಲ್ಲ. ಯಾವುದೆ ಹೇಳಿಕೆಯನ್ನು ಪೊಲೀಸರಿಗೆಕೊಟ್ಟಿಲ್ಲ. ನ್ಯಾಯಾಲಯದ

ಮುಂದಿರುವ ವಸ್ತುಗಳನ್ನು ಈ ಮೊದಲು ಎಲ್ಲು ನೋಡಿಲ್ಲ ಅವು ಯಾರಿಗೆ ಸೇರಿದವು ನನಗೆ ಗೊತ್ತಿಲ್ಲ. ನನಗೆ ಯಾವುದೆ ಪೆಟ್ಟಾಗಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2) ದಿಃ13.11.2024 ರಂದು ರಾತ್ರಿ 8.15 ರಿಂದ 8.30 ಸಮಯದಲ್ಲಿ ನನ್ನ ತಂದೆ ಮತ್ತು ನನ್ನ ಅಕ್ಕ ನಮ್ಮ ಮಹದೇಶ್ವರ ಫ್ರಾವಿಜನ್ ಸ್ಟೋಟರಲ್ಲಿ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾಗ ಆರೋಪಿ 1 , 2 ಅಲ್ಲಿ ಬಂದು ನನ್ನ ಅಕ್ಕನಿಗೆ ಜ್ಯೂಸ್ ಕೊಡು ಎಂದು ಕೇಳಿದರು ಎಂದರೆ ಸರಿಯಲ್ಲ. ಆರೋಪಿ 2 ಸಿಗರೇಟು ಕೊಡ್ಲೆ ಎಂದು ಕೇಳಿದರು ಎಂದರೆ ಸರಿಯಲ್ಲ. ಈ ಬಗ್ಗೆ ನನ್ನ ಅಕ್ಕ ಆರೋಪಿ 2ನ್ನು ಯಾಕಣ್ಣ ಹೀಗೆ ಕೊಡ್ಲೆ ಅಂತಿದಿ ಎಂದು ಕೇಳಿದಕ್ಕೆ ಆರೋಪಿ 2 ನನ್ನ ಅಕ್ಕನನ್ನು ಉದ್ದೇಶಿಸಿ ನಾನು ಇದೇ ಊರಿನವರು ನನ್ನ ಬಳಿಯು ಅಂಗಡಿ ಇದೆ. ನಮ್ಮನ್ನೆ ದುಡ್ಡು ಕೇಳುತ್ತೀಯ ಎಂದು ಏಕವಚನದಲ್ಲಿ ಬೈದರು ಎಂದರೆ ಸರಿಯಲ್ಲ. ಆರೋಪಿ 1 , 2 ರವರು ನನ್ನ ಅಕ್ಕನಿಗೆ ಬೋಳಿಮಗನೆ ಸೂಳೆಮಗನೆ ಎಂದು ಬೈದರು ಎಂದರೆ ಸರಿಯಲ್ಲ. ನನ್ನ ಅಕ್ಕನ ಮೈಮೇಲಕ್ಕೈ ಹಾಕಿ ಎಳೆದಾಡಿ ಅವಳು ಹಾಕಿದ್ದ ಬಟ್ಟೆ ಹರಿದು ಹಾಕಿದರು ಮತ್ತು ಮಾನಕ್ಕೆ ಕುಂದುಂಟು ಮಾಡಿದರು ಎಂದರೆ ಸರಿಯಲ್ಲ. ಆರೋಪಿ 1 ಕೈಯಿಂದ ನನ್ನ ಅಕ್ಕನ ತಲೆಗೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಕ್ಕ ಕೂಗಿದ್ದರಿಂದ ನಾನು ಹಾಗೂ ನನ್ನ ತಂದೆ ಮನೆಯಿಂದ ಹೊರಗೆ ಬಂದು ಯಾಕೆ ಮಾಡುತ್ತಿದ್ದಿ ಎಂದು ಕೇಳಿದಾಗ ಆರೋಪಿ 1 , 2ರವರು ನನ್ನನ್ನು ಎಳೆದಾಡಿ ಅವರು ಧರಿಸಿದ್ದ ಶರ್ಟನ್ನು ಹರಿದುಹಾಕಿದ್ದಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಲ್ಲಿಗೆ ಬಂದ 3 ರಿಂದ 10ನೆ ಆರೋಪಿಗಳು ಆರೋಪಿ 1 , 2 ರವರ ಜೊತೆ ಸಮಾನ ಉದ್ದೇಶದಿಂದ ಗುಂಪುಕಟ್ಟಿಕೊಂಡು ಬಂದು ನನಗೆ ಮತ್ತು ನನ್ನ ತಂದೆಗೆ ಕೈಯಿಂದ ತಲೆ ಮತ್ತು

ಮೈಮೇಲೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ನೆಲಕ್ಕೆ ಕೆಡವಿಕೊಂಡು ಕಾಲುಗಳಿಂದ ತುಳಿದು ಸೂಳೆಮಗನೆ ಬೋಳಿಮಗನೆ ಎಂದು ಬೈದಿದ್ದಾರೆ ಎಂದರೆ ಸರಿಯಲ್ಲ. ಆರೋಪಿ 2 ಬಿದಿರುದೊಣ್ಣೆಯಿಂದ ಇದು ನಿನ್ನಿಂದಲೆ ಎಂದು ನನ್ನ ಅಕ್ಕನಿಗೆ ಬೀಸಿದ ಎಂದರೆ ಸರಿಯಲ್ಲ. ಆಗ ನಾನು ತಡೆದು ದೊಣ್ಣೆಯನ್ನು ಹಿಡಿದುಕೊಳ್ಳಲು ಹೋದಾಗ ನನ್ನ ಹಣೆಗೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಈ ಬಗ್ಗೆ ಸಾಕ್ಷಿ 4 ರಿಂದ 12 ರವರು ನಮ್ಮನ್ನು ಸಮಾಧಾನ ಮಾಡಿ ಕಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹೋಗುವಾಗ ನಿಮ್ಮ ಸಂಸಾರದ ಜನರನೆಲ್ಲ ಯಾರಿಗು ಸಿಗದಂತೆ ಕತ್ತರಿಸಿ ಬಿಸಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ನಾನು ಈಗ ನನಗೆ ಓದಿ ಹೇಳಿದಂತೆ ಹೇಳಿಕೆಯನ್ನು ಈಗ ಓದಿ ಹೇಳಿದಂತೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ6 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಮೇಲೆ ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದರ ಸಂಖ್ಯೆ ಎಸ್ ಸಿ 16/25 ಆಗಿರುತ್ತದೆ ಎಂದರೆ ಸರಿಯಲ್ಲ ನಾವು ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

3) ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ